ಎಡ್ಗಡೆ ಮನೆ. ಕೊನೇಲಿ ಎಲ್ಡು ಮನೆ ಸೇರಿ ಇವೆಲ್ಡು ನಂಗೇ ಇರ್ಲಿ ಅಂತ ನಮ್ಮುಡುಗ್ರುನ್ನ ಕರ್ಕಂಡು ಬಂದು ಇಕ್ಕಂಡೀರ ಅಂತ ಆ ನಡ್ಲು ಮನೆ ಮೇಲೆ ಆರಾಡ್ತಾರೆ. ಈಗ್ಲೂ ನೋಡಿ ಅಂತದೆ ಏನ ನೆಡಿತೀತೆ. ಅದ್ಕೆ ಆ ನಡ್ಲು ಮನೆ ಅಂಗೆ ಕಣ್-ಕಣ್ ಬಿಡ್ತಿರದು. ಓ, ಯಾಕ ಎದ್ದು ಎಲ್ಲ ಆಚೆ ಕಡೀಕೆ ಬತಾವ್ರೆ. ಜಾಗ ನಮ್ದೆಯ ನಮ್ದೆಯ ಅಂತ ಜಗ್ಳ ಮಾಡ್ತಾವಲ್ಲ, ಆ ಜಾಗಕ್ಕೆ ಎಲ್ಲಾರ್ರೂ ಬಲ್ಗಡೆ ಮನೇವು ಕರ್ಕಂಡು ಹೋಗ್ತಾವೆ. ಏನಾಗ್ತೀತೋ... ಓ ಅದೇನ ಗುಂಡಿ ತೋಡಿ ತೋರುಸ್ತಾವೆ ಇರಿ, ಅಲ್ಲೆಂತದ ಇರಂಗೀತೆ ಮೇಲೆತ್ತುತಾವೆ. ಅದೇನದು... ಎಂತದೋ ಕಲ್ಲು, ಹಾಂ ಕಲ್ಲಾ...? ಓ ಕಲ್ಲಲ್ಲ ದೇವ್ರು! ದೇವ್ರು. ಅದೇನ ಮಾತುಕತೆ ಕೇಳುಸ್ಕಳಿ ನೀವೆ.

ಬಲ್ಗಡೆ ಮನೆ: ನೋಡ್ರಪ್ಪ ಇದು ನಮ್ದೇವ್ರು, ಶಿವುನ ಲಿಂಗ. ಇದು ಇರಕಡೆ ಇವ್ರು ಅದೆಂಗೆ ಇವ್ರ ದೇವ್ರ ಪೂಜೆ ಮಾಡಾರು?



ಎಡ್ಗಡೆ ಮನೆ: ಓ, ಈಷ್ಟು ದಿನ ಇಲ್ದಿರದು ಇವತ್ತೆಂಗೆ ಬಂತು, ಅದೇನ್ ಕರಾಮತ್ ಮಾಡೀರಿ ಏಳಿ.

ಬಲ್ಗಡೆ ಮನೆ: ಕರಾಮತ್ತು ಇಲ್ಲ ಗಿರಾಮತ್ತು ಇಲ್ಲ. ಎಷ್ಟೋ ವರ್ಷ ಅಳೇದಿದು. ನಾವು, ನೀವು ಈ ಊರಿಗೆ ಬರಾಕೆ ಮುಂಚಿಂದು, ಶಿವ ತಾಂಡವ ಮಾಡಿದ್ದು ಇಲ್ಲೆ ಅಂತೆ, ಅದ್ಕೆ ಈ ಕಲ್ಲಿನ ಮೇಲೆ ಶಿವುನ ಎಜ್ಜೆ ಗುರ್ತು ಇರದು.

ನೋಡಿ, ನೋಡಿ ಬಲ್ಗಡೆ ಮನೇವು ಎಂಗೆಲ್ಲ ಏಳ್ತಾವೆ, ಎಡ್ಗಡೆ ಮನೇವು ಇಷ್ಟುಕ್ಕೆ ಎದ್ರುಕಂಡು ಕೆನ್ನಗೊಡ್ಕಂಡು ಕೈ ಮುಗಿತಾವೆ. ಮುಗೀತು ಕತೆ ಇನ್ನ, ಇವು ಮೊದ್ಲೇ ದಡ್ ನನ್ನ ಮಗ್ನವು ಅಂದ್ನಲ್ಲಾ ಗೊತ್ತಾತ ಈಗ? ಯಾರದೋ ಮಾತು ಜೋರಾಗ್ ಕೇಳ್ತೀತೆ ಇರಿ ಕೇಳನ.

ಎಡ್ಗಡೆ ಮನೆ: ನೀವು ಸುಳ್ಳು ಏಳ್ತಿರದು. ಇದು ಅಷ್ಟು ಅಳೆ ಕಲ್ಲಾಗಿದ್ರೆ ಅಳೆದ್ರು ತರ ಕಾಣದು. ಈಗ ಕೆತ್ತುಸ್ಕಂಡು ಬಂದು ಕತೆ ಕಟ್ತದೀರಾ? ನೀವು ಏನಾರ ಏಳಿ, ನಾವು ನಮ್ ಮಾರವ್ವನ್ನು ಗುಡಿ ಕಟ್ಟದೆಯಾ.

ಬಲ್ಗಡೆ ಮನೆ: ಅದೆಂಗಾದತು, ನಿಮ್ದು ತಿಂದುಣ್ಣ ದೇವ್ರು, ನಮ್ದು ಮಡಿ-ಮೈಲ್ಗೆ ಅನ್ನ ದೇವ್ರು. ಎಂಗೆ ಒಟ್ಟಿಗೆ ಒಂದ್ಕಡೆ ಗುಡಿ ಮಾಡದು.

ಎಡ್ಗಡೆ ಮನೆ: ಎಷ್ಟೊಂದ್ಕಡೆ ಇಂಗೆ ಎಲ್ಡು ದೇವ್ರು ಒಟ್ಗೆ ಇರದು ನೋಡಿಲ್ವ?

ಬಲ್ಗಡೆ ಮನೆ: ಬೇರೆ ಕಡೆ ಮಾತು ಬೇಡ. ಇಲ್ಲಿ ಬೇಡ ಅಂದ್ರೆ ಬೇಡ ಅಷ್ಟೆ.

ಓ... ಓ... ಇವತ್ತು ಜಗ್ಳ ಒಡ್ದಾಟುಕ್ಕೇ ಓಗ್ಬೋದೇನೋ. ಎಡ್ಗಡೆ ಮನೇವು ನಿಮ್ ದೇವ್ರುನ್ನೇ ಒತ್ಕಂಡು ಬೇರೆ ಕಡೀಕೋಗಿ ಅಂತಾವೆ. ಅಷ್ಟೇ ಅಲ್ಲ ಅವ್ರ ದೇವ್ರನ್ನೇ ಕಿತ್ತೆಸೆಯಕೆ ನೋಡ್ತಾವೆ. ಅರೆರೆ! ನಡ್ಲು ಮನೆ ಏನ ಮಾತಾಡ್ತೈತೆ ಕೇಳ್ರಪ್ಪ.

ನಡ್ಲು ಮನೆ: ಎಲ್ಡು ಕಡೇರು ಸ್ವಲ್ಪ ಜಗ್ಳ ನಿಲ್ಲುಸ್ತೀರ. ಎಲ್ಡು ಕಡೀಕು ಸಮಾಧಾನ ಆಗಂಗೆ ಏನಾರ ಮಾಡಾನ. ನೋಡ್ರಿ, ಒಂದು ಈ ಜಾಗ್ದಲ್ಲಿ ಎಲ್ಡು ಮನೇವು ಎಲ್ಡು ಗುಡಿ ಕಟ್ಟುಸ್ರಿ. ಇಲ್ಲ ಅಂದ್ರೆ ಇಲ್ಲಿ ಯಾರು ಯಾವ ಗುಡೀನು ಕಟ್ಟುಸ್ಬೇಡಿ. ಎಂಗೂ ನಮ್ಮೂರಿಗೆ ಒಂದು ಸ್ಕೂಲು ಅಂತ ಇಲ್ಲ. ನಿಮ್ ದೇವ್ರ ಎಸ್ರಾಗೆ ಅದುನ್ನೇ ಕಟ್ಟುಸ್ಬಿಡಿ. ಶಿವ ಅವ್ನು ಯಾವ ಎಸ್ರಾಗೆ ಇದ್ರೂ ಎಲ್ರಿಗು ಅವ್ನು ಅಪ್ಪ. ಇನ್ನು ನಿಮ್ಮ ಮಾರವ್ವ ಶಿವನ ಎಂಡ್ತಿ ಪಾರೋತೀನೆ. ಅಂಗಿದ್ದಾಗ ಗಂಡ-ಎಂಡ್ತೀನ ದೂರ ಮಾಡಿ ಯಾಕೆ ಪಾಪ ಕಟ್ಕಂಡೀರ ನೋಡಿ. ಅವ್ರಿಬ್ರು ಗುಡಿ ಒಟ್ಟಿಗೆ ಕಟ್ಟುಸ್ಕಂಡು ಇರನಾ ಅಂತಾನೆ ನಿಮ್ತಾವ ಇಂಗೆಲ್ಲಾ ಆಡುಸ್ತಾರೇನೋ.

ಇದಪ್ಪ ಮಾತು ಅಂದ್ರೆ. ಅಂತೂ ನಡ್ಲು ಮನೆ ಇದ್ದಿದ್ಕೂ ಇವತ್ತು ಸಾರ್ತಕ ಆತು. ಒಂದೋಷ್ಟು ಜನ ಒಪ್ಕಂಡಂಗೆ ಆತು, ಅಯ್ಯೋ ಒಬೊಬ್ರಿಗೆ ಇದೂ ಸಮಾಧಾನ ಆದಂಗಿಲ್ಲ, ಅವುಕ್ಕೆಲ್ಲ ಜಗ್ಳ ಇನ್ನೂ ಮುಂದ್ವರ್ಸಿದ್ರೆ ಚನ್ನಾಗಿರದೇನೋ, ಮೂತಿ ಸೊಟ್ಟುಗೆ ಮಾಡ್ಕಂಡು ಓಗ್ತಾವೆ. ಆದ್ರೂ ಒಪ್ಕೊಂಡೋರೆ ಜಾಸ್ತಿ ಜನ ಇದಾರಲ್ಲ, ಅಂಗಾಗಿ ಒಂಟ್ರು ಎಲ್ಲಾರು. ನೋಡನ ನಾಳೆ ಇಲ್ಲಿ ಎಲ್ಡು ಕಡೆ ಗುಡಿಗಳು ಏಳ್ತಾವ, ಇಲ್ಲ ಒಂದು ಸ್ಕೂಲು ಬಂದ್ಬಿಡುತ್ತಾ ಅಂತ. ಆಗ್ಲಾರ ಆ ಸ್ಕೂಲಿನ ಮಕ್ಳು ಬಂದು ನನ್ನತ್ರ ಕುತ್ಕಂಡು ಊಟ ತಿನ್ಕಂಡು ಮಾತಾಡ್ತಾವಲ್ಲ, ಅದಾದ್ರು ಕೇಳುಸ್ಕಳನಾ ಅಂತ ಕಾಯ್ತೀನಿ.

ಜಗ್ಳ ಆಗಿ ಮೂರ್ನಾಕು ದಿನಾತು. ಅದ್ಯಾಕ ಏನು ಮಾತುಕತೆಯಾದಂಗೆ ಕಾಣ್ಲಿಲ್ಲ. ಎಂತದೇ ವಿಷ್ಯ ಆದ್ರೂ ಎಡ್ಗಡೆ-ಬಲ್ಗಡೆ ಮನೇವು ಕಿತ್ತಾಡವು, ಮುನುಸ್ಕಳವು, ಮಾತು ಬಿಡವು. ಆಗ ನಡ್ಲು ಮನೆ